# ಕರ್ನಾಟಕ ವಿಧಾನ ಪರಿಷತ್ತು

| | | |
|---|---|---|
| ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1732 (1976) |
| ಮಾನ್ಯ ಸದಸ್ಯರ ಹೆಸರು | : | ಶ್ರೀ ರಾಮೋಜಿಗೌಡ (ಪದವೀಧರರ ಕ್ಷೇತ್ರದಿಂದ ಚುನಾಯಿತರಾದವರು) |
| ಉತ್ತರಿಸುವ ದಿನಾಂಕ | : | 24.03.2026 |
| ಉತ್ತರಿಸುವ ಸಚಿವರು | : | ಮಾನ್ಯ ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ ಮೂಲಸೌಲಭ್ಯ ಅಭಿವೃದ್ಧಿ ಸಚಿವರು |

| ಕ್ರ. ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ಕಳೆದ ಮೂರು ವರ್ಷಗಳಲ್ಲಿ ಕೆಐಎಡಿಬಿ ಎಷ್ಟು ಭೂಮಿಯನ್ನು ಸ್ವಾಧೀನಪಡಿಸಿಕೊಂಡಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ಕಳೆದ 01-04-2022 ರಿಂದ 31-03-2025 ವರೆಗೆ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ಮಂಡಳಿಯಿಂದ ಕೈಗಾರಿಕಾ ಪ್ರದೇಶಗಳಿಗಾಗಿ ಒಟ್ಟು 22760-27½ ಎಕರೆ ಜಮೀನನ್ನು ಸ್ವಾಧೀನಪಡಿಸಿಕೊಳ್ಳಲಾಗಿರುತ್ತದೆ.<br>ಜಿಲ್ಲಾವಾರು ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಭೂಮಿಯನ್ನು ಸ್ವಾಧೀನಪಡಿಸಿಕೊಂಡ ರೈತರಿಗೆ ಪರಿಹಾರ ಪಾವತಿಯಲ್ಲಿ ವಿಳಂಬ ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ಕೆ.ಐ.ಎ.ಡಿ.ಬಿ. ವತಿಯಿಂದ ಸ್ವಾಧೀನಪಡಿಸಿಕೊಳ್ಳುವ ಜಮೀನಿನ ಪರಿಹಾರವನ್ನು ಸಂಬಂಧಪಟ್ಟ ಖಾತೆದಾರರು / ಹಿತಾಸಕ್ತಿದಾರರಿಗೆ ಪಾವತಿಸುವ ಸಂಬಂಧ ಆರ್.ಟಿ.ಜಿ.ಎಸ್. ಮುಖಾಂತರ ಹಣವನ್ನು ನೇರವಾಗಿ ರೈತರ ಖಾತೆಗಳಿಗೆ ಜಮಾ ಮಾಡಲಾಗುತ್ತಿದೆ. |
| ಇ) | ನ್ಯಾಯಾಲಯದ ಆದೇಶಗಳ ಪ್ರಕಾರ ಇನ್ನೂ ಎಷ್ಟು ಭೂಮಾಲೀಕರು ಹೆಚ್ಚಿನ ಪರಿಹಾರಕ್ಕಾಗಿ ಕಾಯುತ್ತಿದ್ದಾರೆ; (ಮಾಹಿತಿ ನೀಡುವುದು); | ಭೂಮಾಲೀಕರಿಂದ ಹೆಚ್ಚಿನ ಪರಿಹಾರಕ್ಕಾಗಿ ವಿವಿಧ ನ್ಯಾಯಾಲಯಗಳಲ್ಲಿ ಒಟ್ಟು 86 ಪ್ರಕರಣಗಳು ದಾಖಲಾಗಿರುತ್ತವೆ. |
| ಈ) | ಸ್ವಾಧೀನಪಡಿಸಿಕೊಳ್ಳುವ ಮೊದಲು ರೈತರಿಗೆ ಸ್ಪಷ್ಟ ಮಾಹಿತಿ ಮತ್ತು ಒಪ್ಪಿಗೆಯನ್ನು ನೀಡಲಾಗುತ್ತಿದೆಯೇ; | ಕೆಐಎಡಿ ಕಾಯ್ದೆ ಕಲಂ 28(1) ರಡಿ ಪ್ರಾಥಮಿಕ ಅಧಿಸೂಚನೆ ಹೊರಡಿಸಿದ ನಂತರ ದಿನಪತ್ರಿಕೆಗಳಲ್ಲಿ ಪ್ರಚಾರಪಡಿಸಿ ಸ್ವಾಧೀನ ಪ್ರಕ್ರಿಯೆಗೆ ಒಳಪಟ್ಟಿರುವ ಭೂಮಾಲೀಕರಿಗೆ / ರೈತರಿಗೆ ಕಲಂ 28(2) ರಡಿ ನೋಟೀಸ್ ನೀಡಿ, ಕಲಂ 28(3) ರಡಿ ವಿಚಾರಣೆ ಮಾಡಿ ಭೂಮಾಲೀಕರ ಅಭಿಪ್ರಾಯ ಪಡೆದು ರೈತರ / ಭೂಮಾಲೀಕರಿಗೆ ಅವಕಾಶ ನೀಡಿ ವಿಶೇಷ ಭೂಸ್ವಾಧೀನಾಧಿಕಾರಿಯವರು ರೈತರ ಅಹವಾಲು-ಗಳನ್ನು ಪರಿಗಣಿಸಿ ಕಲಂ 28(3) ರಡಿ ಆದೇಶ ಹೊರಡಿಸಿ, ಜಂಟಿ ಅಳತೆ ಕಾರ್ಯ ಪೂರೈಸಿ ಕಲಂ 28(4) ರಡಿ ಅಂತಿಮ ಅಧಿಸೂಚನೆ ಹೊರಡಿಸಲಾಗುತ್ತದೆ. |
| ಉ) | KIADB ಸ್ವಾಧೀನಪಡಿಸಿಕೊಂಡ ಎಷ್ಟು ಭೂಮಿಗಳು ಕಾನೂನು ವಿವಾದ ಅಥವಾ ನ್ಯಾಯಾಲಯದ ತಡೆಯಾಜ್ಞೆಯಲ್ಲಿವೆ; | ಕೆ.ಐ.ಎ.ಡಿ.ಬಿ. ವತಿಯಿಂದ ಸ್ವಾಧೀನಪಡಿಸಿಕೊಂಡಿರುವ ಜಮೀನಿನ ಪೈಕಿ ಒಟ್ಟು 4349-00 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿವಿಧ ನ್ಯಾಯಾಲಯಗಳಲ್ಲಿ ಒಟ್ಟು 1088 ಪ್ರಕರಣಗಳು ದಾಖಲಾಗಿದ್ದು, 63 ಪ್ರಕರಣಗಳಲ್ಲಿ ತಡೆಯಾಜ್ಞೆ ಇರುತ್ತವೆ. |

| | | |
|---|---|---|
| ಊ) | KIADB ಭೂ ವಿವರಗಳಿಗಾಗಿ ಒಂದೇ ಆನ್‌ಲೈನ್ ಪೋರ್ಟಲ್ ಅನ್ನು ರಚಿಸುವ ಯೋಜನೆ ಸರ್ಕಾರದ ಮುಂದಿದೆಯೇ? | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಗೆ ಸಂಬಂಧಿಸಿದಂತೆ ಭೂಸ್ವಾಧೀನ, ಕಟ್ಟಡ ವಿನ್ಯಾಸ ಅನುಮೋದನೆ ಮತ್ತು ಮಂಜೂರಾತಿ, ಕೈಗಾರಿಕಾ ನಿವೇಶನ ಹಂಚಿಕೆಗಾಗಿ ಏಕಗವಾಕ್ಷಿ ವ್ಯವಸ್ಥೆ, ನ್ಯಾಯಾಲಯದ ಪ್ರಕರಣಗಳಿಗೆ CCMS, ಆಸ್ತಿ ತೆರಿಗೆ (SIR) ಪಾವತಿಗಾಗಿ ಆನ್ ಲೈನ್ ವ್ಯವಸ್ಥೆ ಇತ್ಯಾದಿ ಜಾರಿಯಲ್ಲಿದ್ದು, ಈ ಎಲ್ಲಾ ಆನ್ ಲೈನ್ ಅಪ್ಲಿಕೇಷನ್ ಗಳನ್ನು ಒಗ್ಗೂಡಿಸಿ (ಸಂಯೋಜಿಸಿ) ಪೋರ್ಟಲ್‌ನ್ನು ಈಗಾಗಲೇ ಸಿದ್ಧಪಡಿಸಿದ್ದು, ಪರೀಕ್ಷಾ ಹಂತದಲ್ಲಿರುತ್ತದೆ. |

**ಸಿಐ 209 ಐಎಪಿ 2026**

**(ಎಂ.ಬಿ. ಪಾಟೀಲ)**
ಬೃಹತ್ ಮತ್ತು ಮಧ್ಯಮ ಕೈಗಾರಿಕೆ ಹಾಗೂ
ಮೂಲಸೌಲಭ್ಯ ಅಭಿವೃದ್ಧಿ ಸಚಿವರು

**ಕಳೆದ ಮೂರು ವರ್ಷಗಳಲ್ಲಿ ಕೈಗಾರಿಕೆಗಳನ್ನು ಸ್ಥಾಪನೆ ಮಾಡುವ ಉದ್ದೇಶದಿಂದ ಮಂಡಳಿಯಿಂದ ಜಿಲ್ಲಾವಾರು ವಿವರಗಳನ್ನು ಈ ಕೆಳಕಂಡಂತೆ ನೀಡಲಾಗಿದೆ.**

ಅನುಬಂಧ-1

| ಕ್ರ ಸಂ | ಜಿಲ್ಲೆಯ ಹೆಸರು | ಕಲಂ 28(4) ರಂತೆ ವಿಸ್ತೀರ್ಣ (ಎ-ಗು) |
|---|---|---|
| 1 | ಬೆಂಗಳೂರು ನಗರ | 660–37 |
| 2 | ಬೆಂಗಳೂರು ಗ್ರಾಮಾಂತರ | 6106–22 |
| 3 | ರಾಮನಗರ | 2–03 |
| 4 | ಮೈಸೂರು ಜಿಲ್ಲೆ | 980–13 |
| 5 | ಚಿತ್ರದುರ್ಗ | 1167–31 |
| 6 | ಕೋಲಾರ | 2041–21½ |
| 7 | ಚಿಕ್ಕಬಳ್ಳಾಪುರ | 2412–25 |
| 8 | ಉಡುಪಿ | 381–53 |
| 9 | ತುಮಕೂರು | 1970–37 |
| 10 | ಚಾಮರಾಜನಗರ | 838–29 |
| 11 | ವಿಜಯಪುರ | 305–21 |
| 12 | ಬೆಳಗಾವಿ | 576–10 |
| 13 | ಬಾಗಲಕೋಟೆ | 444–31 |
| 14 | ಧಾರವಾಡ | 3563–01 |
| 15 | ಗದಗ | 217–22 |
| 16 | ಬಳ್ಳಾರಿ | 157–58 |
| 17 | ಕಲಬುರಗಿ | 618–18 |
| 18 | ರಾಯಚೂರು | 312–35 |
| | **ಒಟ್ಟು** | **22760–27½** |

ವಿಶೇಷ ಜಿಲ್ಲಾಧಿಕಾರಿ-2